# ಮರಳಿ ಬಂದ ಕಪಿಲ್

ಕಳೆದ ನಾಲ್ಕು ತಿಂಗಳಿಂದ ಅಭಿಮಾನಿಗಳ ಕಣ್ಣಿಗೆ ಬೀಳದೆ ನಾಪತ್ತೆಯಾಗಿರುವ ಹಿಂದಿ ಕಿರುತೆರೆಯ ಕಾಮಿಡಿ ಕಿಂಗ್ ಕಪಿಲ್ ಶರ್ಮಾ, ಮರಳಿ ಕಿರುತೆರೆಯ ಮೇಲೆ ಪ್ರತ್ಯಕ್ಷವಾಗುತ್ತಿದ್ದಾನೆ. ಕಡಲ ತೀರದಲ್ಲಿ ಬನಿಯನ್ ಹಾಕಿಕೊಂಡು ಜಾಗಿಂಗ್ ನಡೆಸುತ್ತಿರುವ ಕಪಿಲ್‌ನ ಭಾವಚಿತ್ರಗಳು ಜಾಲತಾಣಗಳಲ್ಲಿ ಪ್ರತ್ಯಕ್ಷವಾಗಿವೆ. ಅಕ್ಟೋಬರ್‌ನಲ್ಲಿ ಕಪಿಲ್‌ನ ಹೊಸ ಕಾಮಿಡಿ ಶೋ (ದಿ ಕಪಿಲ್ ಶರ್ಮಾ ಶೋ) ತೆರೆಯ ಮೇಲೆ ಕಾಣಿಸಿಕೊಳ್ಳಲಿದೆ. ಇದನ್ನು ಸ್ವತಃ ಕಪಿಲ್ ಹೇಳಿಕೆಯೊಂದರಲ್ಲಿ ತಿಳಿಸಿದ್ದಾನೆ. ಮತ್ತೆ ತೆರೆಯ ಮೇಲೆ ಕಾಣಿಸಿಕೊಳ್ಳಬೇಕಾದರೆ ದೇಹತೂಕ ಕಡಿಮೆ ಮಾಡಿಕೊಳ್ಳಲೇಬೇಕೆಂದು ಕಪಿಲ್ ದಿನವೂ ಸಾಕಷ್ಟು ದೈಹಿಕ ಕಸರತ್ತು ನಡೆಸುತ್ತಿದ್ದಾನಂತೆ. ಹತ್ತು ವರ್ಷಗಳಿಂದ ಪುರುಸೊತ್ತೇ ಇಲ್ಲದೆ ಸತತವಾಗಿ ದುಡಿದ ಆತ, ಇತ್ತೀಚೆಗೆ ಬೆಂಗಳೂರಿನಲ್ಲಿ ವೆಲ್‌ನೆಸ್ ಕ್ಲಿನಿಕ್ ಒಂದರಲ್ಲಿ ಸೂಕ್ತ ಚಿಕಿತ್ಸೆ ಪಡೆದುಕೊಂಡಿದ್ದಾನಂತೆ.

ಕಿರುತೆರೆಯಿಂದ ಕಣ್ಮರೆಯಾಗುವುದಕ್ಕೆ ಮುನ್ನ, 'ಫ್ಯಾಮಿಲಿ ಟೈಮ್ ವಿದ್ ಕಪಿಲ್ ಶರ್ಮಾ' ಎನ್ನುವ ಶೋ ನಡೆದಿತ್ತು. ಆದರೆ ಆ ಹೊಸ ಶೋ ಕೇವಲ ಮೂರೇ ವಾರಗಳಲ್ಲಿ ಟಿ.ವಿ.ಗಳಿಂದ ಕಣ್ಮರೆಯಾಗಿತ್ತು. ಕಪಿಲ್‌ನ ಅನಾರೋಗ್ಯವೇ ಅದಕ್ಕೆ ಕಾರಣ ಎನ್ನಲಾಗಿತ್ತು. ಈಗಲೂ ಕೆಲವು ಸುದ್ದಿಮೂಲಗಳ ಪ್ರಕಾರ, ಕಪಿಲ್ ಆರೋಗ್ಯ ಚೆನ್ನಾಗಿಲ್ಲ.

ಹಿಂದಿ ಕಿರುತೆರೆಯಲ್ಲಿ ಅತ್ಯಧಿಕ ವೀಕ್ಷಕರನ್ನು ಸೃಷ್ಟಿಸಿದ 'ಕಾಮಿಡಿ ಸರ್ಕಸ್'ನಲ್ಲಿ ಕಪಿಲ್ ಶರ್ಮಾ ಜತೆಗೆ ಕೃಷ್ಣ ಅಭಿಷೇಕ್ ಮತ್ತು ಭಾರ್ತಿ ಸಿಂಗ್ ಕೂಡಾ ಇದ್ದರು. ಆದರೆ ಕೃಷ್ಣ ಮತ್ತು ಕಪಿಲ್ ನಡುವೆ ವಿರಸವಾದ ಬಳಿಕ ಮೂವರೂ ಮೂರು ದಿಕ್ಕುಗಳಲ್ಲಿ ಹಂಚಿಹೋಗಿ, ತಮ್ಮದೇ ಆದ ಪ್ರತ್ಯೇಕ ಕಾಮಿಡಿ ಶೋಗಳನ್ನು ನಡೆಸತೊಡಗಿದರು. ಇದರ ದೊಡ್ಡ ಹೊಡೆತ ಬಿದ್ದದ್ದು ಮಾತ್ರ ಕಪಿಲ್ ಮೇಲೆಯೇ. ಈಗ ಹೊಸ ಶೋನಲ್ಲಿ ಈ ಮೂವರೂ ಮರಳಿ ಒಗ್ಗೂಡುವ ಸುದ್ದಿ ಇದೆ. ಕೆಲವು ತಮಾಷೆಯ ಪ್ರಕರಣಗಳು ಮತ್ತು ತಾರೆಯರ ಜತೆಗೆ ಕುಶಲೋಪರಿ ಈ ಹೊಸ ಕಾಮಿಡಿ ಸರಣಿಯ ಹೂರಣವಂತೆ.

ಏಕ್‌ದಂ ಜನಪ್ರಿಯತೆಯ ತುತ್ತತುದಿಗೇರಿದ ಬಳಿಕ ವಿವಾದಗಳೂ ಕಪಿಲ್‌ನನ್ನು ಬೆನ್ನು ಹತ್ತಿದ್ದವು. ಈ ವಿವಾದಗಳಿಂದ ಆತನ ವ್ಯಕ್ತಿತ್ವಕ್ಕೆ ಸಾಕಷ್ಟು ಹಾನಿಯೂ ಆಯಿತು. ಸಹನಟ ಸುನಿಲ್ ಗ್ರೋವರ್ ಜತೆಗಿನ ಬಹಿರಂಗ ಜಗಳ, ಮಾಜಿ ಗರ್ಲ್‌ಫ್ರೆಂಡ್ ಪ್ರೀತಿ ಸಿಮೋಸ್ ಜತೆಗಿನ ವಾಗ್ಯುದ್ಧ, ಪತ್ರಕರ್ತನೊಬ್ಬನ ಜತೆಗಿನ ದೂರವಾಣಿ ಜಗಳ, ಹೀಗೆ ಎಲ್ಲವೂ ಕಪಿಲ್‌ನ ಆರೋಗ್ಯ ಚೆನ್ನಾಗಿಲ್ಲ ಎನ್ನುವುದನ್ನೇ ಸೂಚಿಸಿದವು. ಮಾನಸಿಕ ಒತ್ತಡ ಮತ್ತು ಅತಿ ಮದ್ಯಸೇವನೆಯ ಗೀಳು ಬೇರೆ ಸೇರಿಕೊಂಡು ಕಪಿಲ್ ಕೆಲವು ಶೋಗಳನ್ನು ಮಧ್ಯದಲ್ಲಿಯೇ ನಿಲ್ಲಿಸಿದ್ದೂ ನಡೆಯಿತು. ಕೆಲವು ನಟರು ಈತನ ಅಶಿಸ್ತಿನಿಂದ ರೋಸಿಹೋಗಿ ಶೋ ನಲ್ಲಿ ಭಾಗವಹಿಸದೆ ಮರಳಿದ್ದೂ ಸುದ್ದಿಯಾಯಿತು.

ಪತ್ರಕರ್ತರು ತನ್ನ ವಿರುದ್ಧ ಪೂರ್ವಾಗ್ರಹ ಹೊಂದಿದ್ದಾರೆಂದು ಕಪಿಲ್ ಈ ಹಂತದಲ್ಲಿ ಆರೋಪಿಸಿದ್ದ. 'ಫ್ಯಾಮಿಲಿ ಟೈಮ್ ವಿದ್ ಕಪಿಲ್ ಶೋ' ಹಠಾತ್ತನೆ ನಿಂತ ಬಳಿಕ ಕಪಿಲ್ ಪಾರ್ಟಿಗಳಲ್ಲೂ ಕಾಣಿಸಿಕೊಂಡಿಲ್ಲ. ಆತನ ಟ್ವಿಟ್ಟರ್ ಖಾತೆಯಲ್ಲಿ ಕೆಲವು ಮಾನಹಾನಿಕರ ಪೋಸ್ಟ್‌ಗಳು ಕಂಡುಬಂದಾಗ ಅಭಿಮಾನಿಗಳು ವ್ಯಗ್ರರಾಗಿದ್ದರು. ಅದಕ್ಕೆ ತನ್ನ ಮಾಜಿ ಗೆಳತಿಯೇ ಕಾರಣವೆಂದು ದೂರಿ ಕಪಿಲ್ ಮೊಕದ್ದಮೆ ಹೂಡಿದ್ದ. ಬಳಿಕ ಟ್ವಿಟ್ಟರ್ ಖಾತೆಯನ್ನೇ ಸ್ಥಗಿತಗೊಳಿಸಿದ. ಇತ್ತೀಚೆಗೆ ಆಮ್‌ಸ್ಟರ್‌ಡಾಮ್ ಮಾರ್ಕೆಟ್‌ನಲ್ಲಿ ಆತ ಇರುವ ಫೋಟೋವೊಂದು ಪ್ರಕಟವಾಗಿತ್ತು. ಬಳಿಕ ಮುಂಬೈ ವಿಮಾನ ನಿಲ್ದಾಣದಿಂದ ಹೊರಬೀಳುತ್ತಿರುವ ಇನ್ನೊಂದು ಚಿತ್ರವೂ ಪ್ರಕಟವಾಗಿತ್ತು.

2016ರಲ್ಲಿ ಈತ ಎಷ್ಟೊಂದು ಜನಪ್ರಿಯತೆ ಹೊಂದಿದ್ದನೆಂದರೆ, ಕೆಲವು ಬಾಲಿವುಡ್ ತಾರೆಯರೂ ಜನಪ್ರಿಯತೆಯ ಗ್ರಾಫ್‌ನಲ್ಲಿ ಈತನಿಗಿಂತ ಹಿಂದಿದ್ದರು. ಆ ವರ್ಷ 'ಫೋರ್ಬ್ಸ್ 100 ಮಂದಿ ಸೆಲೆಬ್ರಿಟಿ'ಗಳ ಪಟ್ಟಿಯಲ್ಲಿ ಈತ 11ನೇ ಸ್ಥಾನ ಪಡೆದಿದ್ದ. 2017ರಲ್ಲಿ 18ನೇ ಸ್ಥಾನಕ್ಕೆ ಕುಸಿದರೂ ವಾರ್ಷಿಕ 48 ಕೋಟಿ ರೂಪಾಯಿ ಆದಾಯ ಹೊಂದಿದ್ದು ದೊಡ್ಡ ಸುದ್ದಿಯಾಯಿತು. ಪಂಜಾಬಿನ ಅಮೃತಸರದಲ್ಲಿ ಹುಟ್ಟಿದ ಈ ಬಡ ಹೆಡ್‌ಕಾನ್ಸ್‌ಟೇಬಲ್ ಮಗ, ಮುಂಬೈಗೆ ಬಂದು ಏರಿದ ಎತ್ತರ ಇನ್ನೂ ಹತ್ತಾರು ಕಾಮಿಡಿಯನ್‌ಗಳಿಗೆ ಸ್ಫೂರ್ತಿ ತುಂಬಿ, ಸಾಧನೆಯ ದಾರಿ ತೋರಿಸಿತ್ತು. ನಟನಾಗಿ ಬಂದು ನಿರ್ಮಾಪಕನಾಗಿ ಈತ ಆರಂಭಿಸಿದ ಕೆ9 ಕಂಪೆನಿ ಕಿರುತೆರೆಯಲ್ಲಿ ಈತನಿಗೆ ಅಪಾರ ಸಂಪತ್ತನ್ನೂ ತಂದುಕೊಟ್ಟಿತು.

ವಿವಾದಗಳು ಏನೇ ಇದ್ದರೂ ಹಿಂದಿಯಲ್ಲಿ 'ಸ್ಟ್ಯಾಂಡಪ್ ಕಾಮಿಡಿ'ಗೆ ಹೊಸ ಹೊಳಪು ಕೊಟ್ಟಾತ ಈ ಕಪಿಲ್ ಎನ್ನುವುದರಲ್ಲಿ ಎರಡು ಮಾತೇ ಇಲ್ಲ. ಇನ್ನೂ 37ರ ಹರೆಯದ ಈ ಸ್ಫುರದ್ರೂಪಿ, ಯಶಸ್ಸಿನ ಶಿಖರದಲ್ಲಿದ್ದ ತನ್ನ ಶೋಗಳನ್ನು ಅಶಿಸ್ತಿನಿಂದಾಗಿ ತಾನೇ ಹಾಳುಮಾಡಿಕೊಂಡ. ಆದರೆ ಈಗಲೂ ಈತನಿಗೆ ಅಭಿಮಾನಿಗಳು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಧಿಮಾಕು ಮತ್ತು ಇತರ ದೌರ್ಬಲ್ಯಗಳನ್ನು ಅಂಕೆಯಲ್ಲಿಟ್ಟುಕೊಂಡು ಮರಳಿ ಶೋ ನಡೆಸಿದರೆ, ಖಂಡಿತ ಈತನ ಶೋಗಳು ಹಿಂದಿನಂತೆಯೇ ವಿಜೃಂಭಿಸುವುದು ಖಚಿತ.

ಜಾಲತಾಣಗಳಲ್ಲಿ ಈಗಲೂ ಈತನ ಹಳೆಯ ಶೋಗಳನ್ನು ಅಭಿಮಾನಿಗಳು ಚಪ್ಪರಿಸಿ ನೋಡುತ್ತಿರುವುದು ಇದನ್ನೇ ಸೂಚಿಸುವಂತಿದೆ. ಈ ಹಿಂದೆ 'ಕಾಮಿಡಿ ನೈಟ್ಸ್ ವಿದ್ ಕಪಿಲ್ ಶರ್ಮಾ' ಶೋವನ್ನು ನಿರ್ದೇಶಿಸಿದ್ದ ಭರತ್ ಕುಕ್ರೇಟಿಯನ್ನು ಮತ್ತೆ ಈತನ ಹೊಸ ಶೋ ನಿರ್ದೇಶಿಸಲು ಆಹ್ವಾನಿಸಲಾಗಿದೆಯಂತೆ. ಈ ಮಧ್ಯೆ ಕಪಿಲ್ ನಟಿಸಿ ಅರ್ಧದಲ್ಲಿ ಶೂಟಿಂಗ್ ನಿಂತಿದ್ದ ಪಂಜಾಬಿ ಸಿನಿಮಾದ ಶೂಟಿಂಗ್ ಶೀಘ್ರ ಮುಂದುವರಿಯಲಿದೆ. ಅಕ್ಟೋಬರ್‌ನಲ್ಲಿ ಬಿಡುಗಡೆ ಆಗಲಿದೆಯಂತೆ. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.

RNI No 7891/65